3. ಬಂದಿರುವುದಿಲ್ಲ.

4. ಹಳೇ ಬಾಗಲಕೋಟೆಯಲ್ಲಿ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ. ಬೆಣ್ಣೂರು ಹಾಗೂ ತುಳಸೀಗೇರಿಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

5005(6008)ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ(ಬಾಗಲಕೋಟೆ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ಶಿಕ್ಷಕರ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸರ್ಕಾರದ ಧನಸಹಾಯ ನೀಡುವ ಯೋಜನೆಯನ್ವಯ ಎಷ್ಟು ಜನ ಶಿಕ್ಷಕರುಗಳಿಗೆ ಯೋಜನೆಯ ಸೌಲಭ್ಯವನ್ನು ದೊರಕಿಸಿಕೊಡಲಾಗಿದೆ; (ಜಿಲ್ಲಾವಾರು ಸಂಖ್ಯೆ ನೀಡುವುದು):

ಆ) ಈ ಯೋಜನೆಗೆ ನಿಗಧಿಪಡಿಸಿದ ಹಣ ಎಷ್ಟು; ಹಾಗೂ ಅದನ್ನು ಹೆಚ್ಚು ಮಾಡಲು ಸರ್ಕಾರ ಮುಂದಾಗುವುದೇ?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) 2005–06ನೇ ಸಾಲಿನಲ್ಲಿ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಧನ ಸಹಾಯಕ್ಕೆ ಅರ್ಹ ಶಿಕ್ಷಕರಿಂದ ಭರ್ತಿ ಮಾಡಿದ ಅರ್ಜಿಗಳನ್ನು ಶಿಫಾರಸ್ಸು ಪ್ರಾಧಿಕಾರದ ಮೂಲಕ ನಿಧಿಗಳ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ :31–10–2005. ಶಿಕ್ಷಕರಿಂದ ಬರುವ ಎಲ್ಲಾ ಅರ್ಜಿಗಳನ್ನು ನಿಧಿಗಳ ನಿಯಮಾವಳಿಯಂತೆ ಪರಿಶೀಲಿಸಿ ಎಲ್ಲಾ ಅರ್ಹ ಶಿಕ್ಷಕರಿಗೆ 2006ನೇ ಫೆಬ್ರವರಿ/ಮಾರ್ಚ್‌ನಲ್ಲಿ ಧನ ಸಹಾಯವನ್ನು ಚೆಕ್ ಮೂಲಕ ವಿತರಿಸಲಾಗುವುದು. ಶಿಕ್ಷಕರ ಒಬ್ಬ ಮಗಳು/ಮಗ ಮಾತ್ರ ಧನ ಸಹಾಯಕ್ಕೆ ಅರ್ಹರು. ಕಾಲಾವಕಾಶ 31–10–2005 ರವರೆಗೂ ಇರುವುದರಿಂದ 2005–06ರ ಜಿಲ್ಲಾವಾರು ಮಂಜೂರಾತಿ ವಿವರ ಈಗ ಲಭ್ಯವಿಲ್ಲ

ಆ) ಈ ಯೋಜನೆಗೆ ರೂ.80,00,000/– ಗಳನ್ನು ನಿಧಿಗಳ 205–06ರ ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಸಮಿತಿ ಇರುತ್ತದೆ. ಧನ ಸಹಾಯ ಪರಿಸ್ಕರಿಸುವ ಅಧಿಕಾರ ಸಮಿತಿಯ ನಿರ್ಣಯಕ್ಕೆ ಒಳಪಟ್ಟಿರುತ್ತದೆ ಹಾಗೂ ಈ ನಿಧಿಗೆ ಸರ್ಕಾರದಿಂದ ಯಾವುದೇ ರೀತಿಯ ಧನ ಸಹಾಯ (ಅನುದಾನ) ಬರುವುದಿಲ್ಲ.

5006 (5987) ಶ್ರೀ ಧರ್ಮೇಗೌಡ. ಎಸ್. ಎಲ್. (ಬೀರೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಅಕ್ಷರ ದಾಸೋಹ ಕಾರ್ಯಕ್ರಮ ಎಂದಿನಿಂದ ಪ್ರಾರಂಭವಾಗಿರುತ್ತದೆ;

ಆ) ಬೀರೂರು ಕ್ಷೇತ್ರದಲ್ಲಿ ಎಷ್ಟು ಮಕ್ಕಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ.

ಇ) ಬೀರೂರು ಕ್ಷೇತ್ರದ ಶಾಲೆಗಳಲ್ಲಿ ಅಡಿಗೆ ಕೊಠಡಿಗಳನ್ನು ನಿರ್ಮಿಸಲಾಗಿದೆಯೇ;

ಈ) ಬಹುತೇಕ ಕಡೆಗಳಲ್ಲಿ ಅಡಿಗೆ ಕೊಠಡಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಅಡಿಗೆ ಕೋಣೆಗಳಲ್ಲಿದಿರುವಲ್ಲಿಗೆ ಯಾವಾಗ ಈ ಸೌಲಭ್ಯ ಕಲ್ಪಿಸಲಾಗುವುದು;